ಶ್ರೀ ಎಂ. ಎಸ್. ಪಾಟೀಲ್.—ಗ್ರಾಮ ಸೇವಕರನ್ನು ನೇಮಿಸಿಕೊಳ್ಳುವ ಇವರಿಗೆ ಆದತ್ಕೆ ಕೊಟ್ಟು ಸೇರಿಸಿಕೊಳ್ಳುವ ಬಗ್ಗೆ ವಿತಕ್ಕೆ ತಾವು ಕ್ರಮವನ್ನು ತೆಗೆದುಕೊಳ್ಳುವಾರದು ?

ಶ್ರೀ ಬಿ. ರಾಚಯ್ಯ.—ಇದರ ಬಗ್ಗೆ ನಾವು ಡಿಪಿಎಪಿ ಯವರನ್ನು ಕೇಳಿದ್ದೇವೆ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ಸ್ ರೂಲ್ಸ್ ಪ್ರಕಾರವಾಗಿ ಮಾಡುವ ಹಾಗಿದ್ದರೆ ಅಂಥವರಿಗೆ ಅವಕಾಶವನ್ನು ಮಾಡಿಕೊಡುತ್ತೇವೆ.

ಶ್ರೀ ಎಂ. ಎಸ್. ಪಾಟೀಲ್.—ಈ ವೃತ್ತಿಪರ ಶಿಕ್ಷಣ ಕ್ಷೇತ್ರ ಬೆಳೆಯುವುದಕ್ಕೆ ಸರ್ಕಾರದವರು ಒಂದು ವಿಶಿಷ್ಟವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ಹೋದರೆ, ಇದನ್ನು ವಿದ್ಯಾರ್ಥಿಗಳು ಯಾರೂ ಇಷ್ಟಪಡುವುದಿಲ್ಲ. ಆದುದರಿಂದ ಇದರ ಬಗ್ಗೆ ವಿಶಿಷ್ಟವಾಗಿ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ ರಾಚಯ್ಯ.—ಈಗ ಸರ್ಕಾರದವರು ನೇಮಿಸಿಕೊಂಡಿರತಕ್ಕ ಸಂಬ್ಳ ಕಡಿಮೆಯಾಗಿದೆ ಆದರೆ ಖಾಸಗಿ ಸಂಸ್ಥೆಗಳವರು ಮತ್ತು ಸ್ವಯಂ ಸ್ವಾವಲಂಬಿಗಳಾಗಿ ಕೆಲಸ ಮಾಡಬೇಕು ಎನ್ನತಕ್ಕ ಉದ್ದೇಶದಿಂದ ಮತ್ತು ಅವರು ಇನ್ನೂ ಹೆಚ್ಚಿನ ಪ್ರಮಾಣದ ವಿದ್ಯಾಭ್ಯಾಸಕ್ಕೆ ಹೋಗಬೇಕು ಎನ್ನುವ ಈ ಎಲ್ಲಾ ಕಾರಣಗಳು ಇರುವುದರಿಂದ, ವೃತ್ತಿಪರ ಶಿಕ್ಷಣಕ್ಕೆ ನಾವು ಹೆಚ್ಚಿನ ಆದ್ಯತೆ ಕೊಡಬೇಕೆಂದು ಹೇಳಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ಸ್ ರೂಲ್ಸ್‌ನ್ನು ಬದಲಾವಣೆ ಮಾಡಬೇಕೆಂದು ಕೇಳಿದ್ದೇವೆ.

ಶ್ರೀ ಎಂ. ಸೂರ್ಯನಾರಾಯಣ ರಾವ್.—ಸ್ವಾಮಿ, ಮೈಸೂರಿನಲ್ಲಿ ಮಿಷನರಿ ಮ್ಯಾನು ಫಾಕ್ಚರಿಂಗ್ ಕಂಪನಿಯಲ್ಲಿ ವೃತ್ತಿಪರ ಶಿಕ್ಷಣ ಪಡೆದಿದ್ದರೂ ಸಹ ಅವರು ಆ ಫ್ಯಾಕ್ಟರಿಯಲ್ಲಿ ಮತ್ತೆ ಮತ್ತೆ ೩ ವರ್ಷಗಳ ಕಾಲ ಟ್ರೈನಿಂಗ್ ಪಡೆಯಕೊಂಡ ಮೇಲೆ ಅವರನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ ಇದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಎರಡನೆಯದಾಗಿ ನಮ್ಮ ವರ್ತೂರು ಕ್ಷೇತ್ರದಲ್ಲಿ ಒಂದು ಪಾಲಿಟೆಕ್ನಿಕ್‌ನ್ನು ಸ್ಥಾಪಿಸುತ್ತೀರಾ ?

ಶ್ರೀ ಬಿ. ರಾಚಯ್ಯ.—ಮೊದಲನೆಯ ಪ್ರಶ್ನೆ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿ ಹೇಳಿದ್ದಾರೆ ಅದು ನನ್ನ ಗಮನಕ್ಕೆ ಬಂದಿಲ್ಲ. ಎರಡನೆಯದಾಗಿ ವರ್ತೂರಿನಲ್ಲಿ ಪಾಲಿಟೆಕ್ನಿಕ್‌ನ್ನು ಸ್ಥಾಪಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿ ಹೊಗೆಸೊಪ್ಪಿನ ಬ್ಯಾರನ್‌ಗಳಿಗೆ ಕೊಡಬೇಕಾದ ರಿಯಾಯಿತಿ.

೭೨ ಶ್ರೀ ಕೆ. ಎಸ್. ಕಾಳಮರಿಗೌಡ (ಹಿರಿಯಾಪಟ್ಟಣ).—ಮಾನ್ಯ ಕೃಷಿ ಮತ್ತು ಪಶು ಸಂಗೋಪನ ಇಲಾಖೆಯ ಮಂತ್ರಿಗಳು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿ ಹೊಗೆಸೊಪ್ಪಿನ ಬ್ಯಾರನ್‌ಗಳಿಗೆ ೧೯೭೬-೭೮ ಮತ್ತು ೧೯೭೮-೭೯ನೇ ಸಾಲುಗಳಲ್ಲಿ ಕೊಡಬೇಕಾದ ರಿಯಾಯಿತಿ ಮೊತ್ತ ಎಷ್ಟು ?

ಆ) ಈ ಹಣ ಕೇಂದ್ರ ಸರ್ಕಾರದಿಂದ ಬಂದಿದೆಯೇ; ಹಾಗಿದ್ದಲ್ಲಿ ಈ ಹಣ ವಿತರಣೆ ಆಗಿದೆಯೇ ?

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ (ಕೃಷಿ ಮಂತ್ರಿಗಳು).—

ಅ) ೧೯೭೬-೭೮ ೧. ರೂ. ೩೨, ೦೬,೨೫೦.೦೦

೧೯೭೮-೭೯ ೨. ರೂ. ೨೬,೩೭,೭೫೦.೦೦

ಆ) ಬಂದಿದೆ ಹಾಗೂ ವಿತರಣೆ ಮಾಡಲಾಗಿದೆ.

ಶ್ರೀ ಕೆ. ಎಸ್. ಕಾಳಮರಿಗೌಡ.—೧೯೭೬-೭೮ ಮತ್ತು ೧೯೭೮-೭೯ರಲ್ಲಿ ಕೇಂದ್ರಸರ್ಕಾರದಿಂದ ಸಬ್ಸಿಡಿ ಬಂದಿದೆ. ೧೫೦೦ ಬ್ಯಾರನ್‌ಗಳಿಗೆ ಆದನ್ನು ಕೊಡುತ್ತಾ ಇದ್ದಾರೆ. ೧೯೭೬-೭೮ ಮತ್ತು ೧೯೭೮-೭೯ರಲ್ಲಿ ಬ್ಯಾರನ್‌ಗಳಿಗೆ ಒಟ್ಟು ಕೊಡಬೇಕಾದಂಥ ಹಣ ಎಷ್ಟು. ಆದರಲ್ಲಿ ಎಷ್ಟು ಹಣ ಬಂದಿದೆ, ಬಂದಿರತಕ್ಕ ಹಣವನ್ನು ಸರಿಯಾಗಿ ಉಪಯೋಗ ಮಾಡಿದ್ದೀರಾ ? ಕೇಂದ್ರಸರ್ಕಾರದಿಂದ ಸಬ್ಸಿಡಿ ಹಣವನ್ನು ರಾಜ್ಯ ಸರ್ಕಾರ ಬ್ಯಾನರ್‌ಗಳಿಗೆ ಸಂಪೂರ್ಣವಾಗಿ ಕೊಟ್ಟಿದೆಯೇ ? ಕೇಂದ್ರಸರ್ಕಾರ ಎಷ್ಟು ಸಬ್ಸಿಡಿ ಕೊಡಬೇಕಾಗಿತ್ತೋ ಅಷ್ಟನ್ನು ಕೊಟ್ಟಿದೆಯೇ ? ಪಾರ್ಲಿಮೆಂಟ್‌ನಲ್ಲಿ ಈ ಬಗ್ಗೆ ಉತ್ತರ

ಕೊಡುವಾಗ ಎಲ್ಲಾ ಸಬ್ಸಿಡಿ ಹಣವನ್ನು ಕೊಟ್ಟಿದ್ದೇವೆ ಎಂದು ಬಂದಿದೆ. ಇಲ್ಲಿ ಪ್ರಶ್ನೆ ಕೇಳಿದಾಗ ೨೬ ಲಕ್ಷ ಕೊಟ್ಟಿದ್ದೇವೆ ಎಂದು ಹೇಳಿದಿರಿ. ಆದುದರಿಂದ ಕೇಂದ್ರ ಸರ್ಕಾರದಿಂದ ಬಂದ ಸಬ್ಸಿಡಿಯನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡಿದ್ದೀರಾ ?

ಶ್ರೀ ಬಿ. ಎಲ್. ಗೌಡ.— ಹೊಗೆಸೊಪ್ಪಿನ ಬ್ಯಾರನ್ ಕಟ್ಟಲಿಕ್ಕೆ ಸಬ್ಸಿಡಿಯರಿ ಯೋಜನೆಯನ್ವಯ ೧೯೭೬-೭೭ ರಿಂದ ೧೯೭೮-೭೯ರವರೆಗೆ ಕೇಂದ್ರಸರ್ಕಾರದವರು ಸಬ್ಸಿಡಿ ಕೊಡುತ್ತಿದ್ದರು. ಕೇಂದ್ರ ಸರ್ಕಾರದವರು ಕೊಟ್ಟ ಸಬ್ಸಿಡಿಯನ್ನು ರಾಜ್ಯಸರ್ಕಾರ ಬ್ಯಾನರ್‌ಗಳಿಗೆ ಕೊಡಲಿಕ್ಕೆ ಉಪಯೋಗ ಮಾಡಿದೆ. ೧೯೭೭-೭೮ ರಲ್ಲಿ ೩೨,೦೬, ೨೫೦-೦೦ ರೂಪಾಯಿಗಳನ್ನು ಮತ್ತು ೧೯೭೮-೭೯ ರಲ್ಲಿ ೨೬, ೩೭, ೭೫೦-೦೦ ರೂಪಾಯಿಗಳನ್ನು ಕೇಂದ್ರಸರ್ಕಾರದವರು ಕೊಟ್ಟಿದ್ದಾರೆ. ಇದರಲ್ಲಿ ರಾಜ್ಯಸರ್ಕಾರ ಒಂದು ಕಾಸನ್ನೂ ಇಟ್ಟು ಕೊಂಡಿಲ್ಲ, ಈ ಹಣವನ್ನು ರಾಜ್ಯಸರ್ಕಾರದವರು ಕೊಡುತ್ತಾ ಬಂದಿದ್ದಾರೆ. ಹೊಸದಾಗಿ ೬ ಸಾವಿರ ಜನ ಬ್ಯಾರನ್ ಕಟ್ಟಿದರು ಅವರಿಗೆ ನಾವು ಕೊಡುತ್ತೇವೆಂದು ಆಶ್ಯೂರೆನ್ಸ್ ಕೊಟ್ಟಿರಲಿಲ್ಲ. ಬಡ್ಜೆಟ್‌ನಲ್ಲಿದ್ದ ಪರಿಗೆ ಮಾತ್ರ ಕೊಟ್ಟಿದ್ದೇವೆ. ಈ ಯೋಜನೆಯನ್ನು ೧೯೭೯-೮೦ರಲ್ಲಿ ಡಿಸ್‌ಕಂಟಿನ್ಯೂ ಮಾಡಿದೆ.

ಶ್ರೀ ಕೆ. ಎಸ್. ಕಾಳಮರಿಗೌಡ.—೧೯೭೭-೭೮ ಮತ್ತು ೧೯೭೮-೭೯ ರಲ್ಲಿ ಕೇಂದ್ರಸರ್ಕಾರದವರು ಏನು ಸಬ್ಸಿಡಿ ಹಣ ಕೊಟ್ಟಿದ್ದಾರೆ ಆ ಹಣ ಸಂಪೂರ್ಣವಾಗಿ ರೈತರಿಗೆ ತಲುಪಿಲ್ಲ. ೧೯೭೭-೭೮ ಮತ್ತು ೧೯೭೮-೭೯ ರಲ್ಲಿ ಬ್ಯಾನರ್ ಕಟ್ಟಿದವರ ಬಗ್ಗೆ ನಾನು ಕೇಳುತ್ತಾ ಇದ್ದೇನೆ. ಅವರಿಗೆ ಸಬ್ಸಿಡಿ ಹಣ ಕೊಟ್ಟಿಲ್ಲ, ಬೇಕಾದರೆ ನಿದರ್ಶನ ಕೊಡುತ್ತೇನೆ. ಸೂಕ್ತ ತಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಎಲ್. ಗೌಡ.—ನಾನು ಈಗಾಗಲೇ ತಿಳಿಸಿದ ಹಾಗೆ ೧೯೭೭-೭೮ ಮತ್ತು ೧೯೭೮-೭೯ರಲ್ಲಿ ಏನು ಸಬ್ಸಿಡಿ ಬಂದಿದೆ ಅದನ್ನು ಪೂರ್ತಿಯಾಗಿ ಪಾವತಿ ಮಾಡಿದ್ದೇವೆ. ಯಾರಿಗಾದರೂ ಕೊಡದೇ ಇದ್ದರೆ, ಮಾನ್ಯ ಸದಸ್ಯರು ಅದನ್ನು ನನ್ನ ಗಮನಕ್ಕೆ ತಂದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಎಸ್. ಕಾಳಮರಿಗೌಡ.—ಒಂದೆರಡು ಉದಾಹರಣೆಗಳಲ್ಲ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಎಷ್ಟು ಬರಬೇಕಾಗಿದೆ ಎಂಬ ಬಗ್ಗೆ ಪತ್ರ ಬರೆಯಿರಿ ಸಂಪೂರ್ಣ ವರದಿ ತರಿಸಿಕೊಳ್ಳಿ, ಕೇಂದ್ರ ಸರ್ಕಾರದವರಿಗೂ ಇಷ್ಟು ಹಣ ಬರಬೇಕಾಗಿದೆ ಎಂದು ಪತ್ರ ಬರೆದು ಉತ್ತರವನ್ನು ತರಿಸಿಕೊಂಡ ನಂತರವಾದರೂ ಕೊಡುತ್ತೇವೆ ಎನ್ನುವ ಭರವಸೆಯನ್ನು ತಾವು ಕೊಡಬೇಕು.

ಶ್ರೀ ಬಿ. ಎಲ್. ಗೌಡ.—ಇಲಾಖೆಯಿಂದ ವರದಿ ತರಿಸಿದ್ದೇವೆ ; ಚರ್ಚೆ ಮಾಡಿದ್ದೇವೆ. ನನಗೆ ಬಂದಿರತಕ್ಕ ಮಾಹಿತಿ ಪ್ರಕಾರ ಕೇಂದ್ರಸರ್ಕಾರದಿಂದ ಬಂದಿರತಕ್ಕ ಹಣದಲ್ಲಿ ಯಾವ ಒಂದು ಕಾಸನ್ನೂ ರಾಜ್ಯಸರ್ಕಾರದವರು ಇಟ್ಟುಕೊಂಡಿಲ್ಲ. ನಮ್ಮ ಸ್ನೇಹಿತರು ಯಾರಿಗಾದರೂ ಕೊಟ್ಟಿಲ್ಲ ಅಂದರೆ ವಿಚಾರಣೆಮಾಡಿ ಕೊಡುವ ಪ್ರಯತ್ನ ಮಾಡುತ್ತೇನೆ.

ಪ್ರಶ್ನೆ ೭೧

ಶ್ರೀ ಅಬ್ದುಲ್ ಸಜೀರ್‌ಸಾಬ್.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ನನ್ನ ಹೆಸರು ತಪ್ಪಾಗಿಬಿದ್ದಿದೆ. ಇದು ಮಾನ್ಯ ಸಹಕಾರ ಸಚಿವರಿಗೆ ಸಂಬಂಧಪಟ್ಟಿದ್ದು, ಅವರು ಈ ಪ್ರಶ್ನೆಗೆ ಉತ್ತರ ಕೊಡಬೇಕು ಎಂದು ಬರೆದಿದ್ದೇನೆ.

ಅಧ್ಯಕ್ಷರು.—ಈ ಪ್ರಶ್ನೆಗೆ ಸಹಕಾರ ಮಂತ್ರಿಗಳು ಉತ್ತರಕೊಡಬೇಕು ಎಂದು ಬರೆದಿದ್ದಿನೆ. ಇದನ್ನು ನಾನು ನೋಡಿಸುತ್ತೇನೆ.

ಚಾಮರಾಜೇಂದ್ರ ಕಲಾ ಶಾಲೆ ಮೈಸೂರು

೧೧೦. ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರಿನಲ್ಲಿರುವ ಚಾಮರಾಜೇಂದ್ರ ಕಲಾ ಶಾಲೆಯನ್ನು ಪ್ರಥಮ ದರ್ಜೆಯ ಶಾಲೆಯಾಗಿ ಪರಿವರ್ತಿಸಲು ಸರ್ಕಾರ ನಿರ್ಧಾರ ತೆಗೆದುಕೊಂಡಿದ್ದರ ಬಗ್ಗೆ, ಯೋಜನೆಯನ್ನೇನಾದರೂ ರೂಪಿಸಲಾಗಿದೆಯೇ ?